ಬೀದರ್ ಜಿಲ್ಲೆಯ ಕೋಲಾರ್ ಕೈಗಾರಿಕಾ ಶೆಡ್ಡುಗಳಿಂದ ಆಗುತ್ತಿರುವ ಪರಿಸರ ಮಾಲಿನ್ಯ.

315 (720) ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):ಮಾನ್ಯ ಪರಿಸರ ಜೀವಿಶಾಸ್ತ್ರ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಕೋಳಾರ ಕೈಗಾರಿಕಾ ಪ್ರದೇಶದಲ್ಲಿರುವ ಕೈಗಾರಿಕಾ ಶೆಡ್ಡುಗಳು ಎಷ್ಟು;

ಆ) ಇವುಗಳಿಂದ ಹೊರಸೂಸುವ ಹೊಗೆ ಹಾಗೂ ಇತರ ಮಾಲಿನ್ಯದಿಂದ ನಾಗರೀಕರಿಗೆ ತೊಂದರೆಯುಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಪರಿಸರವನ್ನು ಕಾಪಾಡಲು ಈ ಕೈಗಾರಿಕೆಗಳು ಕೈಗೊಂಡಿರುವ ಕ್ರಮಗಳೇನು ಹಾಗೂ ಸರ್ಕಾರದವರ ಕ್ರಮಗಳೇನು?

ಶ್ರೀ ಬಸವರಾಜ ನೀ.ಶಿವಣ್ಣನವರ್ (ಪರಿಸರ ಮತ್ತು ಜೀವಶಾಸ್ತ್ರ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು.)

ಅ) ಒಟ್ಟು 85 ಕೈಗಾರಿಕೆಗಳಿದ್ದು, ಇವುಗಳಲ್ಲಿ 17 ಉದ್ದಿಮೆಗಳಷ್ಟೇ ಕಾರ್ಯಚರಣೆಯಲ್ಲಿದೆ.

ಆ) ದೂರುಗಳು ಬಂದಿವೆ.

ಇ) ಮಾಲಿನ್ಯವನ್ನು ತಡೆಗಟ್ಟಲು ಈ ರಾಸಾಯನಿಕ ಹಾಗೂ ಔಷಧ ತಯಾರಿಸುವ ಘಟಕಗಳು ಜಲ ಮಾಲಿನ್ಯವನ್ನು ನಿಯಂತ್ರಿಸಲು ಸಾಮಾನ್ಯವಾಗಿ ಸೋಲಾರ್ ಎವಪೋಷನ್ ಪೌಂಡ್‌ಗಳನ್ನು ಹಾಗೂ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಚಿಮಣಿ, ಸ್ಕ್ರಬ್ಬರ್, ಬ್ಯಾಗ್ ಫಿಲ್ಟರ್‌ಗಳಿಂದ ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಿದೆ.

ಹೆಚ್ಚಿನ ಮಾಲಿನ್ಯಕಾರಕ ನೀರನ್ನು ಹೈದರಾಬಾದಿನ ಬಳಿ ಇರುವ ಪಟ್ಟೆಂಚೇರಿಗೆ ಸಾಗಿಸಿ ಸಂಸ್ಕರಿಸಲು ಸೂಚಿಸಲಾಗಿದೆ. ಸಾಮಾನ್ಯ ಸಯುಕ್ತ ಸಂಸ್ಕರಣ ಘಟಕ ಒಂದನ್ನು ಸ್ಥಾಪಿಸಲು ಸರ್ಕಾರ ಕೈಗಾರಿಕಾ ಸಂಘಕ್ಕೆ ಜಮೀನು ಕೊಡಿಸಿದೆ. ಮತ್ತು ಈ ಘಟಕವನ್ನು 9 ತಿಂಗಳಲ್ಲಿ ಮುಗಿಸಲು ಸೂಚಿಸಿದೆ.

ಭಾಲ್ಕಿ ತಾಲ್ಲೂಕು ಲಖಣಗಾಂವ್ ಗ್ರಾಮಕ್ಕೆ ರಸ್ತೆ, ಕುಡಿಯುವ ನೀರು ಒದಗಿಸುವ ಬಗ್ಗೆ.

316 (611) ಶ್ರೀ ಬಸವರಾಜ ಪಾಟೀಲ ಅಟ್ಟೂರ್: ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ತಾಲ್ಲೂಕು ಲಖಣಗಾಂವ್ ಗ್ರಾಮ ಕಂದಾಯ ವೃತ್ತವಾಗಿದ್ದು, ದೊಡ್ಡ ಗ್ರಾಮ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಈ ಗ್ರಾಮದಲ್ಲಿ ರಸ್ತೆ, ಕುಡಿಯುವ ನೀರು, ವಿದ್ಯುತ್, ಶಾಲೆ, ಆರೋಗ್ಯ ಕೇಂದ್ರ ಇತ್ಯಾದಿ ಮೂಲ ಭೂತ ಸೌಕರ್ಯಗಳನ್ನು ಒದಗಿಸದೇ ಇರುವುದು ನಿಜವಲ್ಲವೇ.

ಇ) ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯು ಈ ಗ್ರಾಮದಲ್ಲಿ ಮೇಲ್ಕಂಡ ಸೌಲಭ್ಯಗಳನ್ನು ಒದಗಿಸಲು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ. ಎಂ.ಪಿ. ಪ್ರಕಾಶ್. (ಗ್ರಾಮೀಣ್ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ) ಬಂದಿರುತ್ತದೆ.

ಆ) ನಿಜವಿರುವುದಿಲ್ಲ.

ಇ) 1. ರಸ್ತೆ ಸೌಲಭ್ಯ

ಈ ಗ್ರಾಮಕ್ಕೆ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ಸುಮಾರು 60.00 ಲಕ್ಷ ರೂ.ಗಳಲ್ಲಿ ಭಾತಂಬ್ರಾ ದಿಂದ ರಸ್ತೆ ಡಾಂಬರೀಕರಣ ಮಾಡಲಾಗುತ್ತಿದೆ.

2.ನೀರಿನ ವ್ಯವಸ್ಥೆ

ವಿಶ್ವಬ್ಯಾಂಕ್ ನೆರವಿನ ಯೋಜನೆಯಡಿ ದತ್ತು ತೆಗೆದುಕೊಂಡ ಗ್ರಾಮವಾಗಿದ್ದು, ನಳ ನೀರು ಸರಬರಾಜು ಯೋಜನೆ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ, ಗ್ರಾಮಸ್ಥರು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

3. ವಿದ್ಯುತ್ ಸಂಪರ್ಕ

ಈ ಗ್ರಾಮವು ವಿದ್ಯುದ್ದೀಕರಣ ಹೊಂದಿ, 315 ಖಾಸಗಿ ಮನೆಯವರು ವಿದ್ಯುತ್ ಸಂಪರ್ಕ ಹೊಂದಿರುತ್ತಾರೆ, 7 ಸಂಖ್ಯೆ ಎಚ್ಹೆಚ್ ನ್ನು, ಕಲ್ಪಿಸಲಾಗಿದೆ, 66 ಐಪಿ, ಸೆಟ್ಟಿಗಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. 7 ಎಲ್.ಟಿ. 5 ಸಾಮರ್ಥ್ಯ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಬೀದಿ ದೀಪ ಹೊಂದಿರುತ್ತದೆ, 55 ಭಾಗ್ಯ ಜ್ಯೋತಿ ಅಡಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

4. ಶಿಕ್ಷಣ ವ್ಯವಸ್ಥೆ

ಈ ಗ್ರಾಮದಲ್ಲಿ ಪ್ರಾಥಮಿಕದಿಂದ ಪ್ರೌಢ ಶಿಕ್ಷಣ ಸೌಲಭ್ಯವಿದೆ.

5. ವೈದ್ಯಕೀಯ ಸೌಲಭ್ಯ

ಈ ಗ್ರಾಮದಲ್ಲಿ ಪ್ರಾರ್ಥಮಿಕ ಆರೋಗ್ಯ ಘಟಕ ಸೌಲಭ್ಯವಿದೆ.

6. ಪಶು ಆಸ್ಪತ್ರೆ

ಈ ಗ್ರಾಮದಲ್ಲಿ ಗ್ರಾಮೀಣ ಪಶು ಚಿಕಿತ್ಸಾಲಯ ಸೌಲಭ್ಯವಿದೆ.

7. ಶೌಚಾಲಯ

ನಿರ್ಮಲ ಗ್ರಾಮ ಯೋಜನೆಯಡಿ 59 ಶೌಚಾಲಯಗಳ ನಿರ್ಮಾಣ ಮಾಡಲಾಗಿದ್ದು, ಇನ್ನು 180 ಶೌಚಾಲಯಗಳು ಪ್ರಗತಿ ಹಂತದಲ್ಲಿರುತ್ತದೆ.

8. ಬಯೋಗ್ಯಾಸ್

57 ಬಯೋಗ್ಯಾಸ್ ಸ್ಥಾವರಗಳನ್ನು ಪೂರ್ಣಗೊಳಿಸಲಾಗಿದ್ದು, ಇನ್ನು 70 ಸ್ಥಾವರಗಳು ಪ್ರಗತಿಯ ಹಂತದಲ್ಲಿರುತ್ತವೆ.